ಇ) ಸರ್ಕಾರಕ್ಕೆ ಭಾರ ಆಗಿರುವ ಪೌರಸಭೆಯು ಉತ್ತಮ ಗುಣಮಟ್ಟದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹಣದ ಕೊರತೆಯಿಂದ ಶಹಾಬಾದ್ ಪುರಸಭೆ ನೌಕರರಿಗೆ ನಾಲ್ಕು ತಿಂಗಳಿಂದ ಸಂಬಳ ಕೊಟ್ಟಿರುವುದಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳು ಗುಲ್ಬರ್ಗಾ ತಮ್ಮ ದಿನಾಂಕ: 4.12.1991ರ ಪತ್ರದಲ್ಲಿ ನೌಕರರಿಗೆ ಸಂಬಳ ಕೊಡಲು ವಸೂಲಾತಿಯನ್ನು ಹೆಚ್ಚಿಸಿ ಮತ್ತು ಡಿಸೆಂಬರ್ ಅಂತ್ಯದವರೆಗಿನ ಆಕ್ಟ್ರಾಯ್ ಅನುದಾನ ರೂ. 93.488.00 ನ್ನು ಬಿಡುಗಡೆ ಮಾಡಲಾಗಿದೆ. ಇದರ ಜೊತೆಗೆ ವಸೂಲಾತಿಯನ್ನು ಸಹ ಹೆಚ್ಚಿಸಲಾಗಿದೆ.

ಆ) ಪೌರಸಭೆಯ ಕಾನೂನಿಗೆ ಅವಶ್ಯಕತೆಯು ಇದ್ದರೆ ತಿದ್ದುಪಡಿ ತರಲಾಗುವುದು.

ಇ) ಆಕ್ಟ್ರಾಯ್ ಪದ್ಧತಿಯನ್ನು ಪುನರ್ ಜಾರಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ. ಮತ್ತು ಕಾರ್ಯನಿರ್ವಾಹಕ ಪದ್ಧತಿಯನ್ನು ಕಂಡು ಹಿಡಿಯಲಾಗುತ್ತಿದೆ.

ರಾಜ್ಯದಲ್ಲಿನ ನಕಲಿ ಲಾಟರಿ ಮಾರಾಟ ಮಾಡುತ್ತಿರುವ ಬಗ್ಗೆ

344-ಶ್ರೀ ಬಾಬುರಾವ್ ಚವಾಣ್(ಶಹಾಬಾದ್): ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಕಲಿ ಲಾಟರಿ ಟಿಕೇಟುಗಳು ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಇ) ಸರ್ಕಾರಕ್ಕೆ 1989-90ಹಾಗೂ 1990-91ನೇ ಸಾಲಿನಲ್ಲಿ ಲಾಟರಿಯ ಮುಖಾಂತರ ಎಷ್ಟು ಹಣ ಬಂದಿದೆ; ಹಾಗೂ ಗಳಿಸಿದ ಲಾಭವೆಷ್ಟು?(ವರ್ಷವಾರು ವಿವರ ನೀಡುವುದು)

ಈ) ಲಾಟರಿಯಲ್ಲಿ ಹೊಸದಾದ ಯಾವುದಾದರೂ ಬದಲಾವಣೆ ಮಾಡುತ್ತಿದ್ದೀರಾ?

ಶ್ರೀ ಟಿ.ಎಂ. ಮಂಜುನಾಥ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮಾ ರಾಜ್ಯ ಮಂತ್ರಿಗಳು):

ಅ) ರಾಜ್ಯದಲ್ಲಿ ನಕಲಿ ಲಾಟರಿ ಟಿಕೇಟು ಮಾರಾಟದ ಒಂದೇ ಒಂದು ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆ.

ಆ) ದಿನಾಂಕ 29-1-92ರಂದು ರಾಜ್ಯದ ಪೋಲೀಸರು ಮಿಜೋರಾಂನ ಹೆಸರಿನ "ರಾಜ ರಾಜನ್ ವೀಕ್ಲಿ" ಹೆಸರಿನ 7.5 ಲಕ್ಷ ನಕಲಿ ಟಿಕೇಟುಗಳನ್ನು ಪತ್ತೆ ಹಚ್ಚಿ ಆಪಾದಿತರನ್ನು ಮುಖ್ಯ ಮೆಟ್ರೋಪಾಲಿಟನ್ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದಾರೆ.

ಇ)

	1989-90	1990-91
	ರೂ.	ರೂ. ಕೋಟಿಗಳಲ್ಲಿ
ಮಾರಾಟದ ಹಣ ಒಟ್ಟು	19.94	18.34
ನಿವ್ವಳ ಲಾಭ	3.91	3.51

ಈ) ಮಾರುಕಟ್ಟೆಯಲ್ಲಿರುವ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಒಂದು ಸಂಖ್ಯೆ "ಮೈಸೂರು ಲಕ್ಷ್ಮಿ" ಲಾಟರಿಯನ್ನು ದಿನಾಂಕ 4-3-92ರಿಂದ ಜಾರಿಗೊಳಿಸಲು ನಿರ್ಧರಿಸಲಾಗಿದೆ.